ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಯಚೂರು
ಸಿ.ಸಿ.ನಂಬರು.380/2010.
ಸಿಡೆಬ್ಲ್ಯೂ ನಂ.1 ಪಿಡೆಬ್ಲ್ಯೂ ನಂ.1
ಪ್ರಮಾಣೀಕರಿಸಿದ ದಿನಾಂಕಃ 07-04-2014

| | | |
|---|---|---|
| ಸಾಕ್ಷಿದಾರನ ಹೆಸರು | ಃಃ | ಸಿದ್ಧಲಿಂಗಮ್ಮಾ |
| ತಂದೆಃ ಗಂಡನ ಹೆಸರು | ಃಃ | ಶೇಖರಪ್ಪ |
| ವಯಸ್ಸು | ಃಃ | 35ವರ್ಷ |
| ಉದ್ಯೋಗ | ಃಃ | ಕೂಲಿ ಹಾಗೂ ಮನೆ ಕೆಲಸ |
| ವಿಳಾಸ | ಃಃ | ರಾಯಚೂರು. |
| ಮುಖ್ಯ ವಿಚಾರಣೆ | ಃಃ | ಹಿರಿಯ ಸ.ಸ.ಅ.ಅವರಿಂದ |

ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ನನಗೆ ಸುಲೋಚನಾಳ ಪರಿಚಯ ಇದೆ. ಅವರು ಚೀಟಿ ವ್ಯೆವಹಾರ ಮಾಡುತ್ತಿದ್ದರು. ನಾನು ಅವರ ಬಳಿ ಚೀಟಿ ಹಾಕಿದ್ದೆ. 60 ಜನಾ ಸದಸ್ಯರು ಇದ್ದೇವು. ಒಬ್ಬರು ಪ್ರತಿ ತಿಂಗಳು 5,000/- ರೂ. 1ನೇ ಆರೋಪಿ ಮನೆಯಲ್ಲಿ ಪ್ರತಿ ತಿಂಗಳ 10ನೇ ತಾರಿಕು ಚೀಟಿ ನಡೆಯುತಿತ್ತು. ಸುಮಾರು 25 ತಿಂಗಳು ಚೀಟಿ ಕಟ್ಟಿದ್ದೇನೆ. ನನಗೆ 1-2 ಬಾರಿ 10,000/- ರೂ. ಬಂದಿದೆ. ನನಗೆ ಇನ್ನು 40,000/- ರೂ. ಬರಬೇಕಾಗಿದೆ. ನಂತರ ಆರೋಪಿಗಳ ಮನೆಬಳಿ ಹೋದಾಗ ಅವರು ಸಿಗಲಿಲ್ಲ ಆದುದ್ದರಿಂದ ನಾನು ಪೋಲಿಸರಿಗೆ ದೂರು ಕೊಟ್ಟಿದ್ದೇನೆ. ಒಂದು ಚಿಟಿಗೆ 60 ಸದಸ್ಯರಂತೆ ಸುಮಾರು 6 ರಿಂದ 7 ಚೀಟಿ ಮಾಡಿ ಸಾರ್ವಜನಿಕರಿಗೆ ಮೋಸ ಮಾಡಿದ್ದಾರೆ.

ಈಗ ತೋರಿಸಿದ ದಾಖಲೆ ನಾನು ಪೋಲಿಸರಿಗೆ ಕೊಟ್ಟಿರುವ ದೂರು ಆಗಿರುತ್ತದೆ. ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ.1 ಎಂದೂ ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಮರುದಿನವೇ ಪೋಲಿಸರು 1ನೇ ಆರೋಪಿತಳನ್ನು ದಸ್ತಿಗಿರಿ ಮಾಡಿದ್ದರು.

ದಿಃ21-7-2010ರಂದು ಗಂಗಾಧರ ಸ್ವಾಮಿ ಲಕ್ಕಿ ಫ್ಯಾಮಿಲಿ ರಶೀದಿಯನ್ನು ನನ್ನ ಇಬ್ಬರು ಮಕ್ಕಳು ಮತ್ತು ತಾಯಿ ಹೆಸರಿನಲ್ಲಿ ಇದ್ದು ಅವುಗಳನ್ನು ನಾನು ಪೋಲಿಸರ ಮುಂದೆ ಹಾಜರಪಷಿದ್ದೇನೆ. ಆ ಬಗ್ಗೆ ಮರು ಹೇಳಿಕೆಯನ್ನು ಪೋಲಿಸರಿಗೆ ಕೊಟ್ಟಿದ್ದೇನೆ. ರಶೀದಿಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತಿದ್ದು ಅವುಗಳನ್ನು ನಿಪಿ.2 ಮತ್ತು 3 ಎಂದು ಗುರುತಿಸಲಾಯಿತು. ಅವುಗಳ ಮೇಲೆ 1ನೇ ಆರೋಪಿತಳ ಸಹಿ ಇದೆ.

ಪಾಟೀಸವಾಲುಃ4ನೇ ಆರೋಪಿಪರ ಶ್ರೀ ಆರ್ ಕೆ. ವಕೀಲರಿಂದಃ–

ನಾನು ದೂರುಕೊಡಲು ಹೋದ ದಿನಾ 4ನೇ ಆರೋಪಿತಳು ಬಂದಿದ್ದಳು. ಆಕೇಯು ಕೂಡಾ ನಾಲ್ಕು ಚೀಟಿಗಳು ಹಾಕಿದ್ದಾಳೆ. 4ನೇ ಆರೋಪಿ ನನ್ನಿಂದ ಯಾವುದೇ ಹಣ ಪಡೆದಿಲ್ಲ ಮತ್ತು ಯಾವುದೇ ರಶೀದಿ ಕೊಟ್ಟಿಲ್ಲ. ನಾನು 4ನೇ ಆರೋಪಿ ವಿರುದ್ಧ ದೂರು ಕೊಟ್ಟಿಲ್ಲ. 4ನೇ ಆರೋಪಿ ವಿರುದ್ಧ ಯಾವುದೇ ಮರು ಹೇಳಿಕೆ ಕೊಟ್ಟಿಲ್ಲ. 4ನೇ ಆರೋಪಿಯು ಸಹಾ ಮೋಸ ಹೋಗಿದ್ದಾಳೆ ಎಂದರೆ ಸರಿ. 4ನೇ ಆರೋಪಿ ಸಹಾ ಪ್ರತಿ ತಿಂಗಳು ಚೀಟಿ ಕಟ್ಟುತಿದ್ದಳು. ಬಸಮ್ಮಾ ಮತ್ತು ಮಹೇಶ್ವರಿ ವಿರುದ್ಧ ಮಾತ್ರ ದೂರು ಕೊಟ್ಟಿದ್ದೇನೆ. 4ನೇ ಆರೋಪಿ ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ. ರಶೀದಿಗಳ ಮೇಲೆ 4ನೇ ಆರೋಪಿ ಸಹಿಗಳು ಇಲ್ಲ ಎಂದರೆ ಸರಿ. ಯಾವುದೇ ಚೀಟಿಗಳನ್ನು 4ನೇ ಆರೋಪಿ ನಡೆಸುತ್ತಿರಲಿಲ್ಲಾ.

ಪಾಟೀಸವಾಲುಃ1 ರಿಂದ 3ನೇ ಆರೋಪಿಪರ ಶ್ರೀ ಎಮ್. ಎಸ್. ಹೆಚ್. ವಕೀಲರಿಂದಃ–

ಆರೋಪಿಗಳು ಸಹಿ ಮಾಡಿರುವ ರಶೀದಿಗಳನ್ನು ಹಾಜರಪಡಿಸಿದ್ದೇನೆ. ಮನೆಯಲ್ಲಿ ಚೀಟಿ ನಡೆಸುತ್ತಿದ್ದರು. ನಾನು ಹೇಳಿದಂತೆ ಆರೋಪಿಗಳು ಯಾವುದೇ ಚೀಟಿ ನಡೆಸಿಲ್ಲ ಎಂದರೆ ಸರಿಯಲ್ಲ. ಯಾವುದೇ ರಶೀದಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ರಶೀದಿಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದೂರು ಕೊಟ್ಟ ನಂತರ ನಾನು ಪೋಲಿಸರು ಬೆರೆ ಹೇಳಿಕೆ ಕೊಟ್ಟಿಲ್ಲ. ಆರೋಪಿಗಳ ಮತ್ತು ನಮ್ಮ ನಡುವೆ ಯಾವುದೇ ವ್ಯೆವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

ಮುಖ್ಯ ನ್ಯಾಯಿಕ ದಂಡಾಧಿಕಾರಿ, ರಾಯಚೂರು.